ನಾನು 1970ರಲ್ಲಿ ಅವರ ಗೌರವ ಗ್ರಂಥ 'ರಸಚೇತನ'ದ ಸಂಪಾದಕನಾಗಿದ್ದೆ. ಆಗ ಆ ಗ್ರಂಥ ಹುಬ್ಬಳ್ಳಿಯ ಮುದ್ರಣಾಲಯದಲ್ಲಿ ಪ್ರಕಟವಾಗುತ್ತಿತ್ತು. ಅದು ಮೊಳೆ ಜೋಡಿಸುವ ಕಾಲವಾಗಿದ್ದರಿಂದ, ಪ್ರತಿವಾರ ಪ್ರಿಂಟಾಗುತ್ತಿದ್ದ ಬರೀ ನಾಲ್ಕೈದು ಪುಟಗಳ ಕರಡು ತಿದ್ದುವಿಕೆಗಾಗಿ ನಾನು ಗೋವೆಯಿಂದ ಹುಬ್ಬಳ್ಳಿಗೆ ಬಂದು ಹೋಗಬೇಕಾಗಿ ಬರುತ್ತಿತ್ತು. ಆಮೇಲೆ ಅ.ನ.ಕೃ. ಅವರ ಕಥಾಸಂಪುಟ, ಲೇಖನ ಸಂಗ್ರಹ, ವಿಮರ್ಶಾ ಸಂಪುಟಗಳೆಂದು ಸುಮಾರು ಹದಿನೈದು ಗ್ರಂಥಗಳ ಸಂಪಾದಕನಾಗಿ ನಾನು ದುಡಿದಿದ್ದೇನೆ.

- ತ.ರಾ.ಸು. ಮತ್ತು ಬೀಚಿಯವರಂತಹ ಮಹತ್ವಪೂರ್ಣ ಲೇಖಕರ ಕೃತಿಗಳ ಮರುಪ್ರಕಟಣೆ ಹಾಗೂ ಅವರ ಸಂಸ್ಮರಣ ಗ್ರಂಥಗಳ ಪ್ರಕಟಣೆಯಲ್ಲಿ ನಿಮ್ಮ ಅವಿರತ ಶ್ರಮ ಹಾಗೂ ಬದ್ಧತೆ ಎದ್ದು ಕಾಣುತ್ತದೆ. ಈ ಕಾರ್ಯವನ್ನು ನೀವು ಸ್ವಯಂಪ್ರೇರಣೆಯಿಂದ ಮಾಡಿರುವಿರಾ? ಈ ಲೇಖಕರ ಜೊತೆಗಿನ ನಿಮ್ಮ ಒಡನಾಟ ಹೇಗಿತ್ತು?

ನನಗೆ ತ.ರಾ.ಸು. ಮತ್ತು ಬೀಚಿಯವರು ಅ.ನ.ಕೃ. ಮೂಲಕವೇ ಪರಿಚಯವಾದವರು. ಅವರು ಅ.ನ.ಕೃ. ಅವರನ್ನು ಗುರುಸ್ಥಾನದಲ್ಲಿಟ್ಟು ಗೌರವದಿಂದ ಕಾಣುತ್ತಿದ್ದರು.

ಮೈಸೂರಿನಲ್ಲಿದ್ದ ತ.ರಾ.ಸು ಜೊತೆಯಲ್ಲಿ ಹತ್ತಿರದ ಸಂಪರ್ಕವನ್ನು ಹೊಂದಿದ್ದ ನನಗೆ ಅವರ ಬರವಣಿಗೆ, ಕರ್ನಾಟಕ ಚರಿತ್ರೆಯ ಕುರಿತಾದ ಅವರ ಒಲವು ಯಾವಾಗಲೂ ಬೆರಗು ಮೂಡಿಸುತ್ತಿತ್ತು. ತ.ರಾ.ಸು. ಚಾರಿತ್ರಿಕ ವಿವರಗಳನ್ನು ಕಲ್ಪನೆಯ ಮೂಸೆಯಲ್ಲಿಟ್ಟು ಕಾದಂಬರಿಗಳನ್ನು ಬರೆಯುತ್ತಿದ್ದವರು. ಪಾಳೇಗಾರರನ್ನು ಮಹಾರಾಜನ ದರ್ಜೆಯಲ್ಲಿಟ್ಟು ಚಿತ್ರಿಸುವ ಶಕ್ತಿ ಅವರ ಲೇಖನಿಗಿತ್ತು. ಅವರ 'ಹಂಸಗೀತೆ' ಕಾದಂಬರಿ ಸಂಪೂರ್ಣವಾಗಿ ಕಲ್ಪನೆಯನ್ನು ಆಧರಿಸಿತ್ತು. ಒಮ್ಮೆ ಅವರು ಅನಾರೋಗ್ಯದಿಂದ ಮನೆ ಹತ್ತಿರದ ಆಸ್ಪತ್ರೆ ಸೇರಿದ್ದರು. ಕೆಲವು ದಿನಗಳು ಕಳೆದ ಬಳಿಕ ವೈದ್ಯರಿಗೂ ತಿಳಿಸದೆ ಮನೆಗೆ ಬಂದು, ತಪಸ್ಸಿನಂತೆ ಕುಳಿತು ಸುಮಾರು ನಲವತ್ತು ದಿನಗಳಲ್ಲಿ

ಶಾ.ಮಂ. ಕೃಷ್ಣರಾಯ ಹುಟ್ಟಿದ್ದು ಬೆಳಗಾವಿಯಲ್ಲಿ. ತಮ್ಮ ಶಾಲಾ ಶಿಕ್ಷಣವನ್ನು ಉತ್ತರ ಕನ್ನಡದ ಸಿದ್ದಾಪುರದಲ್ಲಿ ನಡೆಸಿ, ಮೈಸೂರು ವಿಶ್ವವಿದ್ಯಾಲಯದ ಬಿ.ಎಡ್., ಎಂ.ಎ. ಪದವಿ ಪಡೆದು ದಶಕಗಳ ಕಾಲ ಗೋವೆಯಲ್ಲಿ ಶಿಕ್ಷಕರಾಗಿ ಕೆಲಸ ಮಾಡಿದ್ದಾರೆ. ಅಲ್ಪಾವಧಿಗೆ ಪತ್ರಿಕೆಗಳ ಸಂಪಾದಕರಾಗಿಯೂ ದುಡಿದಿದ್ದಾರೆ. ನಾಟಕ, ಕತೆ, ಮಕ್ಕಳ ಸಾಹಿತ್ಯ, ಪ್ರವಾಸ ಕಥನ, ವ್ಯಕ್ತಿಚಿತ್ರ, ಜೀವನ ಚರಿತ್ರೆ, ಸಂಪಾದನೆ ಹಾಗೂ ಅನುವಾದ ಪ್ರಕಾರಗಳಲ್ಲಿ 90ಕ್ಕೂ ಅಧಿಕ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಹೊರನಾಡಿನಲ್ಲಿ ಸಂಘ, ಸಂಸ್ಥೆಗಳನ್ನು ಸ್ಥಾಪಿಸಿ ಕನ್ನಡ ಭಾಷೆಯ ಮತ್ತು ಕನ್ನಡ ಕಲಾವಿದರ ಏಳಿಗೆಗೆ ಶ್ರಮಿಸಿದ ಅಪರೂಪದ ಕನ್ನಡ ಪರಿಚಾರಕ ಶಾ.ಮಂ. ಕೃಷ್ಣರಾಯ.

